

**ಡ್ರಗ್ಸ್ ಮಾಫಿಯಾ ಮತ್ತು ಹೈಟೆಕ್ ವೇಶ್ಯಾವಾಟಿಕೆ ಸದಾ ಕೈ ಕೈ ಹಿಡಿದುಕೊಂಡೇ ಸಾಗುತ್ತಿರುತ್ತವೆ. ಮುಖ್ಯವಾಗಿ ಎರಡು ರೀತಿಗಳಲ್ಲಿ ಡ್ರಗ್ಸ್, ಗ್ರಾಹಕರನ್ನು ತಲುಪುತ್ತದೆ. ಒಂದು ನೇರವಾಗಿ ಅವರಿಗೇ ತಲುಪುವುದು. ಇನ್ನೊಂದು ಸೆಲೆಬ್ರಿಟಿ ಪಾರ್ಟಿಗಳಲ್ಲಿ ಬಳಕೆಯಾಗುವುದು. ರೇವ್ ಪಾರ್ಟಿಗಳಲ್ಲಿ ಡ್ರಗ್ಸ್ ಅತಿಯಾಗಿ ಬಳಕೆಯಾಗುತ್ತಿರುತ್ತದೆ.**

ಹುಟ್ಟು ಹಾಕಿದೆ. ದಿನಕ್ಕೊಬ್ಬರು ನಟರು ಈ ಕುರಿತು ಹೇಳಿಕೆ ಕೊಡುತ್ತಿದ್ದಾರೆ. ಒಬ್ಬ ನಟರು ಇದನ್ನು 'ಫನ್' ಎಂದು ವ್ಯಾಖ್ಯಾನಿಸಿದರೆ, ಇನ್ನೊಬ್ಬ ಬುದ್ಧಿವಂತ ನಟ 'ಹೌದಾ? ನನಗೆ ನಿಜಕ್ಕೂ ಆಶ್ಚರ್ಯವಾಗುತ್ತಿದೆ' ಎಂದು ಮಗುವಿನ ಬೆರಗಿನಲ್ಲಿ ಬುದ್ಧಿವಂತಿಕೆಯ ಹೇಳಿಕೆ ಕೊಟ್ಟಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಖಾಲಿ ಕೂತಿರುವ ಇನ್ನೊಬ್ಬ ನಟ, 'ಇಂದಿನ ಗಾಂಧಿನಗರದ ಸ್ಥಿತಿಗೆ ನಿನ್ನೆ ಮೊನ್ನೆ ಬಂದಿರುವ ಬಚ್ಚಾಗಳೇ ಕಾರಣ ಎಂದಿದ್ದಾರೆ'. ಅವರ ಆವೇಶ ನೋಡಿದರೆ, ಹೇಳಿಕೆ ನೀಡುವಾಗಲೂ ಗುಂಗಿನಲ್ಲಿದ್ದರೋ ಎಂಬ ಅನುಮಾನ ಕಾಡದಿರದು. ಒಂದಿಷ್ಟು ಜನ, 'ಇಲ್ಲಿ ಡ್ರಗ್ಸ್ ದಂಧೆ ಇರುವುದು ನಿಜ. ಆದರೆ...' ಎಂದು ರಾಗ ಎಳೆದರೆ, ಇತ್ತೀಚೆಗಷ್ಟೇ ಸೋಷಿಯಲ್ ಮೀಡಿಯಾ ಆ್ಯಕ್ಟಿವಿಸ್ಟ್ ಆಗಿಯೂ ರೂಪುಗೊಂಡಿರುವ ನಟಿಯೊಬ್ಬರು, 'ಸಾರಾಯಿ, ಸಿಗರೇಟುಗಳನ್ನೆಲ್ಲ ನಿಷೇಧಿಸಿ. ಆದರೆ ಗಾಂಜಾದಲ್ಲಿ ದೈವಿಕ ಭಾವವಿದೆ. ಹಾಗಾಗಿ ಅದನ್ನು ಕಾನೂನುಬದ್ಧಗೊಳಿಸಿ' ಎಂದು ದೈವಸಾಕ್ಷಾತ್ಕಾರಕ್ಕಾಗಿ ಒತ್ತಾಯಿಸಿದ್ದಾರೆ. ಈ ನೆಪದಲ್ಲಿ ಚಿತ್ರರಂಗದ ಒಳಗಿನವರ ಪರಸ್ಪರ ದ್ವೇಷ, ಮನಸ್ಸಿನಲ್ಲಿನ ವಿಷಗಳೆಲ್ಲವೂ ನಿಧನಿಧಾನಕ್ಕೆ ಹೊರಗೆ ಬರುತ್ತಿದೆ. ಇಡೀ ಚಿತ್ರರಂಗವೇ ಮಾದಕ ಪದಾರ್ಥ ಸೇವಿಸಿ ಸಂಬಂಧವಿಲ್ಲದ ಹಾಗೆ ಬಡಬಡಿಸುತ್ತಿರುವ ಹಾಗೆ ಭಾಸವಾಗುತ್ತಿದೆ.

ಇನ್ನೊಂದು ಹೊಸ ರಾಗದ ಸಮೂಹಗಾನವೂ ಕೇಳಿಸುತ್ತಿದೆ. 'ಡ್ರಗ್ಸ್ ದಂಧೆ, ಅದನ್ನು ತೆಗೆದುಕೊಳ್ಳುವವರು ಇರಬಹುದು. ಆದರೆ ಆ ಆರೋಪವನ್ನು ಇಡೀ ಚಿತ್ರರಂಗದ ಮೇಲೆ ಹೊರಿಸಬೇಡಿ' ಎನ್ನುವುದೇ ಆ ರಾಗ.

ಕಳೆದ ವರ್ಷ ಚಿತ್ರರಂಗದಲ್ಲಿ 'ಮೀ ಟೂ' ಪ್ರಕರಣಗಳು ಸದ್ದು ಮಾಡಿದ್ದವು. ಒಂದಿಷ್ಟು ನಟಿಯರು, 'ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ' ಎಂದು ಹೇಳಿಕೊಂಡಿದ್ದರು. ಅವರು ಯಾರ ವಿರುದ್ಧ ಆರೋಪ ಮಾಡಿದ್ದರೋ ಅವರನ್ನು ದೈವಸ್ವರೂಪಕ್ಕೇರಿಸಿ, ನೋವನ್ನು ಹಂಚಿಕೊಂಡ ಹೆಣ್ಣುಮಕ್ಕಳನ್ನು ಹೀನಾಮಾನವಾಗಿ ಟ್ರೋಲ್ ಮಾಡಿದ ಕ್ರೌರ್ಯಕ್ಕೂ ಇಡೀ ಚಿತ್ರರಂಗ ಮೌನವಾಗಿ ಸಾಕ್ಷಿಯಾಗಿತ್ತು. ಆಗ ಯಾರೂ, 'ಇಡೀ ಚಿತ್ರರಂಗ ಹಾಗಿಲ್ಲ. ಕೆಲವರು ಹಾಗಿರಬಹುದು' ಎಂದು ಹೇಳುವ ಧೈರ್ಯ ತೋರಿರಲಿಲ್ಲ. 'ಹೆಣ್ಣೊಬ್ಬಳು ತನ್ನ ಮಾನವನ್ನು ಪಣಕ್ಕಿಟ್ಟು ಏನೋ ಹೇಳುತ್ತಿದ್ದಾಳೆ. ಅವಳ ಮಾತುಗಳನ್ನು ಕೇಳಿಸಿಕೊಳ್ಳುವ ವ್ಯವಧಾನ ಉಳಿಸಿಕೊಳ್ಳೋಣ' ಎಂಬ ಬುದ್ಧಿಮಾತು ಯಾವ ಹಿರಿಯರ ಬಾಯಲ್ಲಿ ಬರಲಿಲ್ಲ. ಕೆಲವರಂತೂ ಬಹಿರಂಗವಾಗಿ ಆರೋಪಿಯ ಪರ ನಿಂತು ಹೋರಾಡಿದ್ದರು. ಆ ಹಿರಿಯರೆಲ್ಲರೂ ಈಗ ತುಂಬ ಜವಾಬ್ದಾರಿಯಿಂದ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಒಂದು ಹೆಣ್ಣಿನ ಮೇಲೆ ನಡೆಸುವ ಲೈಂಗಿಕ ದೌರ್ಜನ್ಯದಂಥ ಮಾನಗೇಡಿ ಕೆಲಸಕ್ಕಿಂತ ಡ್ರಗ್ಸ್ ದಂಧೆಯ ಆಪಾದನೆಯಿಂದಲೇ ಗೌರವಕ್ಕೆ ಹೆಚ್ಚು ಚ್ಯುತಿ ಬಂದಿರುವಂತೆ ಅವರಿಗೆ ಅನಿಸುತ್ತಿದೆ.

## ರಂಗಿನ ಲೋಕದ ಎರಡು ಮಹಡಿಗಳು

'ಚಿತ್ರರಂಗದಲ್ಲಿ ಸ್ಪಷ್ಟವಾಗಿ ಎರಡು ಮಹಡಿಗಳಿವೆ' ಎನ್ನುತ್ತಾರೆ ಸೂಕ್ಷ್ಮ ಸಂವೇದನೆಯ ನಿರ್ದೇಶಕರೊಬ್ಬರು.

'ಮೇಲಿನ ಮಹಡಿಯಲ್ಲಿ ಅಪ್ಪ ಮಾಡಿಟ್ಟ ಹಣದಲ್ಲಿ ಐಷಾರಾಮದ ಬದುಕು ಸವೆಸುತ್ತಿರುವ ಲೋಲುಪರು. ದುಬಾರಿ ಚಟಗಳಿಗೆ ದಾಸರಾಗಿ ಮೋಜು ಮಸ್ತಿಯಲ್ಲಿಯೇ ಬದುಕು ಕಳೆಯುವವರು. ಕೆಳಗಿನ ಮಹಡಿಯಲ್ಲಿ ಇನ್ನೊಂದು ವರ್ಗದ ಚಿತ್ರರಂಗವಿದೆ. ಅಲ್ಲಿ ಸಾವಿರಾರು ಬರಹಗಾರರು, ಸಹ ನಿರ್ದೇಶಕರು, ಸಹಕಲಾವಿದರು, ತಂತ್ರಜ್ಞರು ಎಲ್ಲ ಇದ್ದಾರೆ. ಮೇಲಿನ ಮಹಡಿಯಲ್ಲಿರುವವರು ತಮ್ಮ ಒಂದೊಂದು ಸಂಜೆಗಳಿಗೆ ಲಕ್ಷಾಂತರ ರೂಪಾಯಿ ವ್ಯಯಿಸುತ್ತಿದ್ದರೆ ಕೆಳಗಿನ ಮಹಡಿಯಲ್ಲಿರುವವರು ತಿಂಗಳ ಕೊನೆಗೆ ತಮ್ಮ ಮನೆ ಬಾಡಿಗೆ ಕಟ್ಟುವುದು ಹೇಗೆ ಎಂಬ ಚಿಂತೆಯಲ್ಲಿರುತ್ತಾರೆ. ಅವರಿಗೆ ಸಿನಿಮಾ ಎಂಬುದು ಮೋಜಿನ ಬದುಕಿನ ಒಂದು ಭಾಗವಷ್ಟೆ; ಇವರಿಗೆ ಸಿನಿಮಾವೇ ಬದುಕು. ಅವರು ಅಮಲಿನ ಲೋಕದಲ್ಲಿ ಮೈಮರೆತು ಬಿದ್ದುಕೊಂಡಿರುವಾಗ ಇವರು ಒಂದೇ ಒಂದು ಅವಕಾಶಕ್ಕಾಗಿ ಚಪ್ಪಲಿ ಸವೆಸುತ್ತಿರುತ್ತಾರೆ. ಅವರು ಅಭಿಮಾನಿಗಳ ಕಣ್ಣುಗಳಲ್ಲಿ ದೇವರಾಗುತ್ತಾರೆ; ಇವರು ತಮ್ಮ ಪ್ರತಿಭೆ ಎಲ್ಲೂ ಸಲ್ಲದೇ ವ್ಯರ್ಥವಾಗುತ್ತಿರುವುದನ್ನು ದೇವರಾದರೂ ಒಮ್ಮೆ ನೋಡಲಿ ಎಂದು ಹಂಬಲಿಸುತ್ತಿರುತ್ತಾರೆ' ಎಂದು ಸಿನಿಮೀಯ ಶೈಲಿಯಲ್ಲಿಯೇ ಚಿತ್ರರಂಗದ ಪರಿಸ್ಥಿತಿಗೆ ಕನ್ನಡಿ ಹಿಡಿಯುತ್ತಾರೆ.

'ಅನ್ನ ಕೊಡ್ರಪ್ಪ ಅಂದ್ರೆ ಕೊಡಲ್ಲ; ಸಿನಿಮಾಗೆ ಜಿಮ್ಮಿ, ಡಾಲಿ ಕೊಡ್ರಪ್ಪ ಅಂದ್ರೆ ಕೊಡಲ್ಲ; ಆದ್ರೆ ಎಣ್ಣೆಗೆ ಮಾತ್ರ ಎಗ್ಗಿಲ್ಲದೆ ಖರ್ಚು ಮಾಡುತ್ತಿರುತ್ತಾರೆ' ಎನ್ನುವ ಅವರ ಮಾತು ಚಿತ್ರರಂಗದ ಮನಸ್ಥಿತಿಯನ್ನು ಬೆತ್ತಲೆ ಮಾಡುವ ಹಾಗಿದೆ.

ಬೆಳಕಿದ್ದಲ್ಲಿ ಪತಂಗಗಳೂ, ಪತಂಗಗಳನ್ನು ತಿನ್ನಲು ಹಲ್ಲಿಗಳೂ, ಹಲ್ಲಿಗಳನ್ನು ನುಂಗುವ ಹಾವುಗಳೂ ಬರುವುದು ಸಹಜವೇ. ಅದಕ್ಕೆ ಬೆಳಕನ್ನು ದೂಷಿಸಿ ಪ್ರಯೋಜನವಿಲ್ಲ. ಆದರೆ ಹಾತೆಗಳೇ ಸೇರಿಕೊಂಡು ಬೆಳಕನ್ನು ಆರಿಸುವ ಪರಿಸ್ಥಿತಿ ಉಂಟಾದಾಗ ಎಚ್ಚೆತ್ತುಕೊಳ್ಳಲೇಬೇಕು. ಇಲ್ಲವಾದರೆ ಪೂರ್ತಿ ಕತ್ತಲಲ್ಲಿ ಮುಳುಗಬೇಕಾಗುತ್ತದೆ. ಸಿನಿಮಾ ನಿರ್ಮಿತಿಯ ಸೃಜನಶೀಲ ಪ್ರಕ್ರಿಯೆಯೂ ಬೆಳಕನ್ನು ನೀಡುವ ದೀಪದ ಹಾಗೆ. ಅದನ್ನು ಕಾಸ್ಟಿಂಗ್ ಕೌಚ್, ಡ್ರಗ್ಸ್ ಜಾಲ, ಸ್ವಜನಪಕ್ಷಪಾತ, ಜಾತಿವ್ಯಾಮೋಹ ಹೀಗೆ ಹಲವು ಹಾತೆ – ಹಲ್ಲಿಗಳು ಮುತ್ತಿ ಬೆಳಕನ್ನು ಕುಂದಿಸುತ್ತಿವೆ. ಕೆಲವು ಶಕ್ತಿಗಳು ಅದು ಅವುಗಳ ಬೆಂಬಲಕ್ಕೆ ನಿಂತು ದೀಪವನ್ನೇ ಕೆಡಹುವ ಹುನ್ನಾರದಲ್ಲಿಯೂ ಇವೆ.

ಇದು ದೀಪವನ್ನು ಸ್ವಚ್ಛಗೊಳಿಸಿ ಬೆಳಕನ್ನು ಇನ್ನಷ್ಟು ಜ್ವಲಂತಗೊಳಿಸಲು ಸಕಾಲ. ಆದರೆ ಆ ದಿಟ್ಟತನವನ್ನು ಪೊಲೀಸ್ ವ್ಯವಸ್ಥೆಯೂ ಚಿತ್ರರಂಗವೂ ಜೊತೆಯಾಗಿ ತೋರಬೇಕಷ್ಟೆ.

ಪ್ರತಿಕ್ರಿಯಿಸಿ: feedback@sudha.co.in